ಅಸಲು ದಾವಾಃ- 34/2018 ಪಿ.ಡಬ್ಲ್ಯೂಃ- 1

ದಿನಾಂಕಃ 23.09.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ಶ್ರೀ.ಹೆಚ್ ಜಿ ಎಸ್ ವಕೀಲರಿಂದ

ನಿಪಿ 7 ಬಳುವಳಿ ಪತ್ರ ನೋಂದಾಯಿತವಾಗಿಲ್ಲ ಎಂದರೆ ಸರಿ. ನಿಪಿ 7 ನ್ನು ನನಗೆ ಯಾರು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿಯಾದ ಸೈಯ್ಯದ್ ಅಮೀರ್ ಮತ್ತು ಹುತೇಜಾ ಬೀ. ವಾದಪತ್ರದಲ್ಲಿ ದಾವಾ ಸ್ವತ್ತುಗಳ ಚೆಕ್ಕುಬಂಧಿ ತೋರಿಸಿದ್ದೀರಾ ಎಂದರೆ ಹೌದು. ನಾನು ನನ್ನ ದಾವೆಯಲ್ಲಿ ದಾವಾ ಸ್ವತ್ತಿನ ಚೆಕ್ಕುಬಂಧಿ ತೋರಿಸಿಲ್ಲ ಎಂದರೆ ಸರಿ. ಈಗಲೂ ಸಹ ದಾವಾ ಸ್ವತ್ತುಗಳ ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ. ದಾವಾ ಸ್ವತ್ತುಗಳ ಸರ್ವೆ ನಂಬರ್ ಮತ್ತು ನಿಪಿ 7 ರ ಜಮೀನುಗಳ ಸರ್ವೆ ನಂಬರ್ ಬೇರೆ ಬೇರೆ ಇರುತ್ತದೆ ಎಂದರೆ ಗೊತ್ತಿಲ್ಲ. ನಿಪಿ 7 ನ್ನು ಬರೆದ ಸಂದರ್ಭದಲ್ಲಿ ಯಾರ್ಯಾರು ಇದ್ದರು ಎಂದರೆ ನಾನು, ನನ್ನ ತಂದೆ-ತಾಯಿ, ರಸೂಲ್ ಸಾಬ್, ಪ್ಯಾರೆಜಾನ್ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ತಂದೆ ತಾಯಿಗಳ ನಡುಗೆ ಹಣಕಾಸಿನ ವ್ಯವಹಾರ ಆಗಿತ್ತಾ ಎಂದರೆ ಇಲ್ಲ. ನಿಪಿ 7 ರ ಪತ್ರವನ್ನು ಯಾರು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ